ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.
ಸಿ.ಸಿ. ನಂ. 184-2012
........................... ವಿರುದ್ಧ ...........................

PW 01
CW 01

| | | |
|---|---|---|
| ಸಾಕ್ಷಿಯ ಹೆಸರು | ಃ | ಕೆ ಮನೋಹರ ಕೃಷ್ಣಪ್ಪ |
| ತಂದೆಯ ಹೆಸರು | ಃ | ಕೃಷ್ಣಪ್ಪ |
| ವಯಸ್ಸು | ಃ | 62 ವರ್ಷ |
| ಉದ್ಯೋಗ | ಃ | ನಿವೃತ್ತ ಅಬಕಾರಿ ಉಪ ನಿರೀಕ್ಷಕರು |
| ವಾಸ್ತವ್ಯ | ಃ | ಮಂಗಳೂರು |

ದಿನಾಂಕಃ 13-12-2022 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ನಾನು 30-07-2010 ರಿಂದ 05-11-2014 ರವರೆಗೆ ಆನಮೋಡಾ ತನಿಖಾ ಠಾಣೆಯಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 23-09-2011 ರಂದು ಸುಮಾರು ರಾತ್ರಿ 8-30 ಗಂಟೆಗೆ ನಾನು ಆನಮೋಡಾ ತನಿಖಾ ಠಾಣೆಯಲ್ಲಿ ಗೋವಾ ರಾಜ್ಯದಿಂದ ಬರುತ್ತಿರುವ ಎಲ್ಲಾ ವಾಹನಗಳನ್ನು ಪರಿಶೀಲನೆ ಮಾಡುತ್ತಿರುವಾಗ ಸುಮಾರು ಸಂಜೆ 7-00 ಗಂಟೆಯ ಬಾತ್ಮಿದಾರರ ಮೂಲಕ 10 ಚಕ್ರ ಅಶೋಕ ಲೈಲ್ಯಾಂಡ ವಾಹನದಲ್ಲಿ ಅಕ್ರಮ ಸಾರಾಯಿಯನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಬಂದ ಮಾಹಿತಿ ಮೇರೆಗೆ, ರಾತ್ರಿ 8-30 ಗಂಟೆಯ ಸುಮಾರಿಗೆ 10 ಚಕ್ರ ಅಶೋಕ ಲೈಲ್ಯಾಂಡ ವಾಹನ ಸಂಖ್ಯೆಃ ಜಿಜೆ-03-ಎಟಿ-4572 ನೇ ವಾಹನ ಬಂದಿದ್ದು, ಚಾಲಕನನ್ನು ವಿಚಾರಿಸಿದಾಗ ಚಾಲಕ ವಾಹನ ಖಾಲಿ ಇರುವುದಾಗಿ

ತಿಳಿಸಿರುತ್ತಾನೆ. ಸ್ಥಳದಲ್ಲಿದ್ದ ಚಾಸಾ 2 ಮತ್ತು 3 ಪಂಚರವರನ್ನು ಬರಮಾಡಿಕೊಂಡು ಪ್ರಕರಣದ ಮಾಹಿತಿಯನ್ನು ತಿಳಿಸಿ, ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ವಾಹನವನ್ನು ಪರಿಶೀಲಿಸಲು ಸ್ಥಳದಲ್ಲಿಯೇ ಶೋಧನಾ ಸಮುಚ್ಚತ ವಾರೆಂಟ್‌ನ್ನು ತಯಾರಿಸಿ, ವಾಹನದ ಕ್ಯಾಬೀನ್‌ನಲ್ಲಿ ಏನೂ ಕಂಡು ಬಂದಿರುವುದಿಲ್ಲ. ಹಿಂಬದಿ ಪರಿಶೀಲನೆ ಮಾಡಿದಾಗ ಅಲ್ಲಿ ಬಾಕ್ಸಗಳ ಮೇಲೆ ಗೋಣಿ ಚೀಲ ಮುಚ್ಚಿದ್ದು ಕಂಡು ಬಂದಿರುತ್ತದೆ. ನಂತರ ಚಾಲಕನನ್ನು ವಿಚಾರಿಸಿದಾಗ ಸದ್ರಿ ರಟ್ಟಿನ ಬಾಕ್ಸಗಳು ಇದ್ದು, ಅವುಗಳಲ್ಲಿ ಗೋವಾ ರಾಜ್ಯದ ತಯಾರಾದ ಸಾರಾಯಿ ಎಂದು ನುಡಿದಿರುತ್ತಾರೆ. ಸಿಬ್ಬಂದಿಗಳ ಸಹಾಯದಿಂದ ಅವುಗಳನ್ನು ಕೆಳಗೆ ಇಳಿಸಿ ಪರಿಶೀಲಿಸಿ ನೋಡಿದಾಗ ಎಗ್ಗ್ ಗೋಲ್ಡ್ ವಿಸ್ಕಿ 750 ಎಂ ಎಲ್‌ನ 12 ಬಾಟಲಗಳು ಒಂದು ಬಾಕ್ಸನಲ್ಲಿ, ಇಂಪಿರಿಯಲ್ ಬ್ಲ್ಯೂ ವಿಸ್ಕಿ 750 ಎಂ ಎಲ್‌ನ 24 ಬಾಟಲಗಳು ಎರಡು ಬಾಕ್ಸಗಳಲ್ಲಿ, ಬ್ಲೆಂಡರ್ ಸ್ಪ್ರೈಡ್ ವಿಸ್ಕಿ 750 ಎಂ ಎಲ್‌ನ 60 ಬಾಟಲಗಳು ಐದು ಬಾಕ್ಸಗಳಲ್ಲಿ, ಐಂಟಿ ಕ್ಯೂಟಿ ಬ್ಲ್ಯೂ ವಿಸ್ಕಿ 750 ಎಂ ಎಲ್‌ನ 60 ಬಾಟಲಗಳು ಐದು ಬಾಕ್ಸಗಳಲ್ಲಿ, ರಾಯಲ್ ಟ್ಯಾಗ ವಿಸ್ಕಿ 750 ಎಂ ಎಲ್‌ನ 96 ಬಾಟಲಗಳು ಎಂಟು ಬಾಕ್ಸಗಳಲ್ಲಿ, ಇರುವುದು ಒಟ್ಟು 21 ಬಾಕ್ಸಗಳಲ್ಲಿ 189 ಲೀಟರ್ ಮದ್ಯ ಇರುವುದು ಕಂಡು ಬಂದಿರುತ್ತದೆ.

ಸದ್ರಿ ಸಾರಾಯಿ ಸಾಗಾಟ ಮಾಡಲು ಯಾವುದೇ ಪಾಸ್ – ವ - ಪರ್ಮಿಟ್ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದ್ರಿ ಬಾಕ್ಸಗಳಿಂದ ತಲಾ ಒಂದು ಬಾಕ್ಸನಿಂದ 21 ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಹಾಗೂ ಅವುಗಳನ್ನು ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ್ ಮಾಡಿ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ನಂತರ ಮಾದರಿ ಸೀಲ್‌ನ ನಕಲುಗಳನ್ನು ಪಡೆದುಕೊಂಡಿರುತ್ತೇವೆ. ವಾಹನವನ್ನು ವಶಕ್ಕೆ ಪಡೆದುಕೊಂಡಿರುತ್ತೇವೆ. ನಂತರ ರಾತ್ರಿ 08-30 ರಿಂದ 9-30 ರ

ವರಗೆ ಪಂಚನಾಮೆಯನ್ನು ಜರುಗಿಸಿ ನಂತರ ಆರೋಪಿ, ಜಪ್ತು ಪಡಿಸಿಕೊಂಡ ವಾಹನ ಹಾಗೂ ಮಧ್ಯದ ಸಮೇತ ಕಚೇರಿಗೆ ಒಳಗೆ ತಂದು 1ನೇ ಆರೋಪಿತನ ವಿರುದ್ದ ಪ್ರಕರಣ ದಾಖಲು ಮಾಡಿರುತ್ತೇನೆ. ಪಂಚನಾಮೆಯಲ್ಲಿರುವ  ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ 1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಪ್ರಥಮ ವರ್ತಮಾನ ವರದಿಯನ್ನು ನಿಪಿ 2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.  ನ್ಯಾಯಾಲಯದ ಮುಂದಿರುವ ವಶಪಡಿಸಿಕೊಂಡ ಮಾದರಿ 21 ಬಾಟಲ್‌ಗಳನ್ನು  ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಮು. ಮಾ 1  ಎಂದು, ನನ್ನ ಸಹಿಗಳನ್ನು ಒಟ್ಟಾಗಿ ಮು. ಮಾ 1 (ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ 1ನೇ ಆರೋಪಿ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

ನಂತರ ದಿಃ  25-10-2011 ರಂದು ಚಾಸಾ 6 ರವರ ಮುಖಾಂತರ ರಾಸಾಯನಿಕ ಪರೀಕ್ಷೆಗೆ ಧಾರವಾಡ ಕಚೇರಿಗೆ ಕಳುಹಿಸಿಕೊಟ್ಟಿರುತ್ತೇನೆ.  ದಿಃ  12-11-2011 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿರುತ್ತೇನೆ. ರಾಸಾಯನಿಕ ಪರೀಕ್ಷಾ ವರದಿಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ರಾಸಾಯನಿಕ ಪರೀಕ್ಷಾ ವರದಿಯನ್ನು ನಿಪಿ 3 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಚಾಸಾ 4 ರಿಂದ  6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇವೆ. ದಿಃ  05-01-2012 ರಂದು ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟೀಸ್‌ನ್ನು ನೀಡಿರುತ್ತೇನೆ.  ಅವರು ಯಾವುದೇ ಉತ್ತರವನ್ನು ನೀಡದೇ ಇದ್ದರಿಂದ ಅವರನ್ನು ಸಹ ಈ ಪ್ರಕರಣದಲ್ಲಿ 2 ನೇ

ಆರೋಪಿಯಾಗಿ ಸೇರಿಸಿರುತ್ತೇನೆ. ಪ್ರಕರಣದ 3 ನೇ ಆರೋಪಿಯನ್ನು ಪ್ರಕರಣದಿಂದ ಕೈ ಬಿಟ್ಟಿರುತ್ತೇನೆ. ದಿಃ 08-11-2013 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮಾದರಿ ಮದ್ಯವನ್ನು ಹೊರತು ಪಡಿಸಿ ಉಳಿದ ಮದ್ಯವನ್ನು ಅಬಕಾರಿ ಡಿವಾಯ್‌ಎಸಪಿ ದಾಂಡೇಲಿರವರಿಗೆ ನಾಶಪಡಿಸಲು ಹಸ್ತಾಂತರಿಸಿರುತ್ತೇನೆ. ದಿಃ 24-02-2012 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ. ಎಸ್.ಕೆ.ಎಸ್ ವಕೀಲರಿಂದ.

ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.